**ಸಾಕ್ಷಿಯನ್ನು ದಿನಾಂಕ 13.08.2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಆರ್ ಎಂ. ವಕೀಲರಿಂದಃ**

ಜಮೀನಿನ ಮೇಲೆ ಕೇಸು ಹಾಕಿರುವ ವಿಚಾರ ಗೊತ್ತಿದೆ. ಮುನಿಯಪ್ಪ ಎನ್ನುವವರು ಕೇಸನ್ನು ಹಾಕಿದ್ದಾರೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಹುಟ್ಟಿದಾಗಿನಿಂದಲ್ಲೂ ವ್ಯವಸಾಯ ಮಾಡುತ್ತೇನೆ. ನಾನು ಪಂಚನತೋಡನಹಳ್ಳಿ ನಿವಾಸಿ. ನಾನು ಹುಟ್ಟಿದ್ದಾಗಿನಿಂದಲೂ ಅಲ್ಲಿಯೇ ವಾಸ ಮಾಡುತ್ತಿದ್ದೇನೆ. ನಾನು ಅಲ್ಲಿಯೇ ವಾಸ ಮಾಡುತ್ತಿದ್ದೇನೆ ಎಂದು ತೋರಿಸಲು ಪಹಣಿ ಮ್ಯುಟೇಶನ್ ಮತ್ತು ಗ್ರ್ಯಾಂಟ್ ಸರ್ಟಿಫಿಕೇಟ ಆಗಿರುವುದನ್ನು ಕೊಟ್ಟಿದ್ದೇನೆ. ನಾನು ವ್ಯವಸಾಯಗಾರ ಎಂದು ಬರೆಯಲಾಗಿರುವ ಯಾವುದೇ ದಾಖಲಾತಿಯನ್ನು ಕೊಟ್ಟಿಲ್ಲ. ನಾನು ನನ್ನ ಪರವಾಗಿ ಸಾಕ್ಷಿ ನೀಡುತ್ತಿದ್ದೇನೆ. ಉಳಿದವರ ಪರವಾಗಿ ನೀವೇನು ಸಾಕ್ಷಿ ಕೊಡುತ್ತಿಲ್ಲಾ ಎಂದರೆ ಸಾಕ್ಷಿಯು ಎದುರು ಪಕ್ಷಕಾರರ ನೀಡಿರುವ ಮಾಹಿತಿ ಎಲ್ಲಾ ಸುಳ್ಳು ಎಂದು ನುಡಿಯುತ್ತಾರೆ. ನಾನು ಕನ್ನಡ ಓದಲು ಬರುತ್ತದೆ. ಇಂಗ್ಲೀಷ ಅಷ್ಟಾಗಿ ಓದಲು ಬರುವುದಿಲ್ಲ. ನನ್ನ ಸಾಕ್ಷಿ ವಿಚಾರಣೆಯ ಹೇಳಿಕೆಯನ್ನು ವೆಂಕಟಪ್ಪ ರವರು ಬೆರದುಕೊಟ್ಟಿದ್ದಾರೆ. ಸಾಕ್ಷಿ ಮತ್ತೆ ನುಡಿಯುತ್ತಾರೆ. ನಾನೇ ಹೇಳಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ.

ಸಾಕ್ಷಿ ವಿಚಾರಣೆಯಲ್ಲಿ ಬರೆದಿರುವ ಮಾಹಿತಿ ಸುಳ್ಳು ಎಂದರೆ ಸರಿಯಲ್ಲ. ಅದರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮುನಿಯಪ್ಪ ಮತ್ತು

ಅವರ ಕುಟುಂಬದವರು ಎಲ್ಲಿದ್ದಾರೆ ಗೊತ್ತಿಲ್ಲ. ವಾದಿಗಳು ಎಲ್ಲಿ ವಾಸವಿದ್ದಾರೆ ಎನ್ನುವ ವಿಚಾರ ನನಗೆ ಸಂಪೂರ್ಣವಾಗಿ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರವನ್ನು ನಾನೇ ಬರೆಸಿ ಹಾಕಿದ್ದೇನೆ. ವೆಂಕಟಸ್ವಾಮಿಯ ಕೃಷ್ಣಪ್ಪ 2 ನೇ ವಾದಿ ನನಗೆ ಗೊತ್ತಿದ್ದಾರೆ. ಅವರು ಕನಕತೋಡನಹಳ್ಳಿಯ ನಿವಾಸಿ. ಅವರಿಗೆ ನಮ್ಮ ಜಮೀನು ಸರ್ವೆ ನಂ.31 ರಲ್ಲಿ 3 ಎಕರೆ 19 ಗುಂಟೆ ಪೈಕಿ 20 ಗುಂಟೆಯನ್ನು 2003 ರಲ್ಲಿ ಪರಭಾರೆ ಮಾಡಿದ್ದೇನೆ. ನಮ್ಮ ತಂದೆ ತಾಯಿ ಮತ್ತು ನಾವೆಲ್ಲರೂ ಸೇರಿ ಮಾಡಿದ್ದೇವೆ.

ಸರ್ವೆ ನಂ. 91 ನನ್ನ ತಾತ ತೋಟಿ ಹನುಮಪ್ಪ ರವರಿಗೆ ಸರ್ಕಾರದಿಂದ ತೋಟಿ ಜಮೀನು ಮಾಡುತ್ತಿದ್ದ ಕಾರಣ ಮಂಜೂರು ಆಗಿದೆ. ಆತ ಕನಕತೋಡನಹಳ್ಳಿಯ ನಿವಾಸಿ. ನನ್ನ ತಾತನಿಗೆ ನಮ್ಮ ತಂದೆ ಒಬ್ಬನೇ ಮಗ. ನನ್ನ ತಾತನಿಗೆ ನಮ್ಮ ತಂದೆ ಒಬ್ಬನೇ ಮಗ ಎಂದು ತೋರಿಸಲು ವಂಶವೃಕ್ಷವನ್ನು ಕೊಟ್ಟಿದ್ದೇನೆ. ಸಾಕ್ಷಿಗೆ ತನ್ನ ಪರ ಗುರುತಿಸಲ್ಪಟ್ಟ ವಂಶವೃಕ್ಷವನ್ನು ಗುರುತಿಸಲು ಹೇಳಿದ್ದು, ಸಾಕ್ಷಿದಾರರು ಸದರಿ ವಂಶವೃಕ್ಷವನ್ನು ಹುಡುಕಲು ಅಸಮರ್ಥರಾಗಿರುತ್ತಾರೆ.

ತೋಟಿ ಹನುಮಪ್ಪ ರವರು ಯಾವಾಗ ಹುಟ್ಟಿದ್ದಾರೆ ಗೊತ್ತಿಲ್ಲ. ಆದರೆ ಸತ್ತಿರುವುದು ಕನಕತೋಡನಹಳ್ಳಿಯಲ್ಲಿ. ನನ್ನ ತಾತನನ್ನು ನಾನು ನೋಡಿಲ್ಲ. ಅವರು ಯಾವ ವರ್ಷದಲ್ಲಿ ತೀರಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿಯ ಹೆಸರು ಮುನಿಯಮ್ಮ. ಆಕೆಯನ್ನು ನಾನು ನೋಡಿಲ್ಲ. ಸದರಿ ಮುನಿಯಮ್ಮ ನನ್ನ ತಾತನ ಜೊತೆ ವಾಸವಿದ್ದರು ಅವರು ಎಲ್ಲಿ ಸತ್ತಿದ್ದಾರೆ ಗೊತ್ತಿಲ್ಲ. ತೋಟಿ ಹನುಮಪ್ಪ ಮತ್ತು

ಮುನಿಯಮ್ಮ ನನ್ನ ಅಜ್ಜಿ ತಾತ ಅಲ್ಲ. ಅವರು ನನ್ನ ತಾತ ಅಜ್ಜಿ ಆಗಿದ್ದರೆ ಅವರಿಗೆ ಸಂಬಂಧಪಟ್ಟ ದಾಖಲಾತಿಗಳು ನನ್ನ ಬಳಿ ಇರುತ್ತಿದ್ದವು ಎಂದರೆ ಸರಿಯಲ್ಲ.

ನನ್ನ ತಂದೆ ಯಾವಾಗ ಹುಟ್ಟಿದ್ದಾರೆ ಗೊತ್ತಿಲ್ಲ. ನನ್ನ ತಾತ ಮತ್ತು ಅಜ್ಜಿಯ ಮರಣ ದೃಡೀಕರಣ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನ್ನ ತಾತ ತೋಟಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ದಾಖಲಾತಿಗಳನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಸರ್ಕಾರದ ವತಿಯಿಂದ ನನ್ನ ತಾತ ತೋಟಿ ಕೆಲಸ ಮಾಡುತ್ತಿರುವ ಬಗ್ಗೆ ಸಕಾರ್ರದ ವತಿಯಿಂದ ಸಂಭಾವನೆ ಬರುತ್ತಿದೆ. ಸಾಕ್ಷಿಗೆ ತನ್ನ ಪರ ಗುರುತಿಸಲ್ಪಟ್ಟ ಸಕಾರ್ರದ ವತಿಯಿಂದ ಸಂಭಾವನೆ ದಾಖಲಾತಿಯನ್ನು ಗುರುತಿಸಲು ಹೇಳಿದ್ದು, ಸಾಕ್ಷಿದಾರರು ಸದರಿ ಸಂಭಾವನೆ ಪತ್ರವನ್ನು ಹುಡುಕಲು ಅಸಮರ್ಥರಾಗಿರುತ್ತಾರೆ. ನನ್ನ ತಾತ ತೋಟಿ ಕೆಲಸ ಮಾಡುತ್ತಿರಲಿಲ್ಲ ಆದಕಾರಣ ಯಾವುದೇ ಸಂಭಾವನೆ ಪಡೆದ ದಾಖಲಾತಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರಿಗೆ 1976 ರಲ್ಲಿ ಗ್ರ್ಯಾಂಟ್ ಆಗಿರುವ ಬಗ್ಗೆ ದಾಖಲಾತಿಯನ್ನು ಕೊಟ್ಟಿದ್ದೇನೆ.

ನನ್ನ ತಂದೆ ವೆಂಕಟಪ್ಪ ಏನು ಓದಿದ್ದಾರೆ ಗೊತ್ತಿಲ್ಲ. ತೋಟಿ ಹನುಮಪ್ಪ ರವರ ಮಗ ವೆಂಕಟಪ್ಪ ಎಂದು ತೋರಿಸಲು ಶಾಲಾ ದಾಖಲಾತಿ ಕೊಟ್ಟಿಲ್ಲ ಆದರೆ ವಾಸದ ದೃಡೀಕರಣ ಪತ್ರವನ್ನು ಮತ್ತು ಸಂಭಾವನ ಪಡೆದ ದಾಖಲಾತಿಯನ್ನು ಕೊಟ್ಟಿದ್ದೇನೆ. ತೋಟಿ ಹನುಮಪ್ಪ ಅಲಿಯಾಸ್ ಹನುಮ ರವರು ದಾಸಪ್ಪ ರವರ ತಂದೆಯಾಗಿದ್ದು,

ತೋಟಿ ಮುನಿಶಾಮಪ್ಪ ರವರ ತಾತ ಎಂದರೆ ಸರಿಯಲ್ಲ. ತೋಟಿ ಹನುಮಪ್ಪ ಅಲಿಯಾಸ್ ಹನುಮ ರವರು ವಾದಿಗಳ ಮುತ್ತಾತ ಎಂದರೆ ಸರಿಯಲ್ಲ. ನನ್ನ ತಂದೆ ಕನಕಚೌಡನಹಳ್ಳಿಯ ನಿವಾಸಿ ಅಲ್ಲ ಎಂದರೆ ಸರಿಯಲ್ಲ ಅವರು ಕಂಗನಹಳ್ಳಿಯಲ್ಲಿ ಹುಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯು ಕಂಗನಹಳ್ಳಿಯ ಪಕ್ಕದ ಚೆನ್ನಕೇಶವಪುರದಲ್ಲಿ ಹುಟ್ಟಿದ್ದಾರೆ ಎಂದರೆ ಸರಿಯಲ್ಲ. ಅದೇ ಕಾರಣದಿಂದ ನಾನು ನನ್ನ ತಂದೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

1976 ರಲ್ಲಿ ನನ್ನ ತಂದೆಯವರಿಗೆ ಸರ್ವೆ ನಂ. 91 ರಲ್ಲಿ 3 ಎಕರೆ 19 ಗುಂಟೆ ರಿಗ್ರ್ಯಾಂಟ್ ಮುಖಾಂತರ, ಸರ್ವೆ ನಂ. 69/2 ರಲ್ಲಿ 28 ಗುಂಟೆಯಲ್ಲಿ, 16/1 ರಲ್ಲಿ 4 ಗುಂಟೆ ಇನಾಮತಿ ಮುಖಾಂತರ ಆಗಿ ರಿಗ್ರ್ಯಾಂಟ್ ಆಗಿದೆ. ಒರಿಜನ್ ಗ್ರ್ಯಾಂಟ್ ತೋಟಿ ಹನುಮಪ್ಪ ರವರು ಆಗಿದ್ದಾರೆ. ಸದರಿ ರಿಗ್ರ್ಯಾಂಟ್ ದಾಖಲಾತಿಯನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಎಲ್ಲಾ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆದರೆ ಓದಿ ನೋಡಿಲ್ಲ. ನನ್ನ ತಂದೆಗೆ ಬಂದಿರುವುದರಿಂದ ನಾನೇ ಸ್ವಾಧೀನದಲ್ಲಿದ್ದೇನೆ. 1973-74 ರಿಗ್ರ್ಯಾಂಟ್ ಪಡೆಯಲು ವೆಂಕಟಪ್ಪ ರವರು ಅರ್ಜಿಯನ್ನು ಹಾಕಿದ್ದರು. ನಾನು 1971 ರಲ್ಲಿ ಹುಟ್ಟಿದ್ದೇನೆ. ಸಾಕ್ಷಿಗೆ ತನ್ನ ಪರ ಗುರುತಿಸಲ್ಪಟ್ಟ ಸರ್ಕಾರದ ವತಿಯಿಂದ ರಿಗ್ರ್ಯಾಂಟ್ ಆದ ದಾಖಲಾತಿಯನ್ನು ಗುರುತಿಸಲು ಹೇಳಿದ್ದು, ಸಾಕ್ಷಿದಾರರು ಸದರಿ ಸರ್ಕಾರದ ವತಿಯಿಂದ ರಿಗ್ರ್ಯಾಂಟ್ ಆದ ದಾಖಲಾತಿಯನ್ನು ಹುಡುಕಲು ಅಸಮರ್ಥರಾಗಿರುತ್ತಾರೆ.

ನಿಡಿ2 ರಲ್ಲಿ ಹನುಮ ಎಂದು ತೋರಿಸಲಾಗಿದ್ದು ತೋಟಿ ಹನುಮ ಇಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಹನುಮ ಎಂದು ಇದೆ ಆದರೆ ನಾನು ಕೊಟ್ಟಿರುವ ದಾಖಲಾತಿಯಲ್ಲಿ ತೋಟಿ ಹನುಮ ಇದೆ. ಸರ್ವೆ ನಂ. 91 ರಲ್ಲಿ ತೋಟಿ ಹನುಮ ಇದೆ ಎಂದು ನುಡಿಯುತ್ತಾರೆ. ತಾನು ಕೊಟ್ಟಿರುವ ಆರ್ ಟಿ ಸಿಯಲ್ಲಿ ತೋಟಿ ಹನುಮ ಅಂತನೇ ಇದೆ. ನಿಡಿ2 ದಾಖಲಾತಿಯಲ್ಲಿ ಹನುಮ ಎಂದು ತೋರಿಸಲಾಗಿದ್ದು ನಾನು ತೋಟಿ ಹನುಮ ಎಂದು ಸುಳ್ಳು ದಾಖಲಾತಿಯನ್ನು ಸೃಷ್ಠಿ ಮಾಡಿ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ನಿಡಿ 7 ರಲ್ಲಿ ವೆಂಕಟಪ್ಪ ಬಿನ್ ತೋಟಿ ಹನುಮಪ್ಪ ಎಂದು ಬರೆಯಲಾಗಿದೆ ಎಂದರೆ ಸರಿ. ನಮ್ಮ ದಾಖಲಾತಿಯಲ್ಲಿ ತೋಟಿ ಹನುಮ ಅಂತ ಇದೆ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಯಾವುದಾದರೂ ಆಸ್ತಿಗೆ ಸಂಬಂಪಟ್ಟಂತೆ ಅರ್ಜಿಯನ್ನು ಹಾಕಿದ್ದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಕೊಡಬೇಕಾಗುತ್ತದೆ ಎಂದರೆ ಸರಿ. ನಾನು ಕೊಟ್ಟಿದ್ದೇನೆ. ನನ್ನ ತಂದೆ ರಿಗ್ರ್ಯಾಂಟ ಪಡೆಯಲು ಸಲ್ಲಿಸಿದ ಅರ್ಜಿಗಳನ್ನು ಮತ್ತು ಅರ್ಜಿಯ ಜೊತೆಗೆ ಸಲ್ಲಿದ ದಾಖಲಾತಿಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನ್ಯಾಯಾಲಯಕ್ಕೆ ಕೊಟ್ಟಿರುವ ದಾಖಲಾತಿಗಳಲ್ಲಿ ನನ್ನ ತಂದೆ ರಿಗ್ರ್ಯಾಂಟ ಪಡೆಯಲು ಸಲ್ಲಿಸಿದ ಅರ್ಜಿಗಳನ್ನು ಮತ್ತು ಅರ್ಜಿಯ ಜೊತೆಗೆ ಸಲ್ಲಿದ ದಾಖಲಾತಿಗಳು ಇಲ್ಲ ಎಂದರೆ

ಸರಿಯಲ್ಲ. ಸದರಿ ದಾಖಲಾತಿಗಳನ್ನು ಹಾಜರು ಮಾಡಿದ್ದಲ್ಲಿ ಸತ್ಯಾಂಶ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.